**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ಚಾ.ಸಾ : 12

ಪ್ರಾ.ಸಾ : 11

ಸಾಕ್ಷಿದಾರರ ಹೆಸರು : ಮೊಹನ್

ತಂದೆಯ ಹೆಸರು : ದೇವಣ್ಣ ಶೆಟ್ಟಿ

ಪ್ರಾಯ : 44 ವರ್ಷ

ಉದ್ಯೋಗ : ಸಹಾಯಕ ಅಂಚೆ ಅಧೀಕ್ಷರು ಉಪ್ಪಿನಂಗಡಿ

ವಾಸಸ್ಥಾನ : ಉಪ್ಪಿನಂಗಡಿ

ಪ್ರಮಾಣ ವಚನ ಭೋದಿಸಿದ ದಿನಾಂಕ : **12.03.2024**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಜನವರಿ 2020 ರಿಂದ 21-05-2023 ರವರೆಗೆ ಪುತ್ತೂರು ಅಂಚೆ ವಿಭಾಗದಲಿ ಸಹಾಯ ಅಂಚೆ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ .

ಸಾಕ್ಷಿಗೆ ಸ್ವತ್ತು ಸ್ವಾದೀನತಾ ಮಹಜರ ತೋರಿಸಲಾಗಿ ಅದನ್ನು ನಿಪಿ-79 ಎಂದು ಸಾಕ್ಷಿ ಸಹಿ ನಿಪಿ-79 ಎ ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಇಲ್ಲಿ ದಿಃ 18-05-2020 ರಂದು ಸಹಿ ಮಾಡಿದ್ದೇನೆ . ಸದರಿ ಸಹಿಯನ್ನು ಸಂಪ್ಯ ಪೋಲಿಸರ ಠಾಣೆ ಪಿ ಎಸ್ ಐ ಚಾಸಾ-23 ರವರ ಕೋರಿಕೆ ಮೇರೆಗೆ ಆರೋಪಿ ರವರು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಇವರಿಗೆ ಕನ್ನಡದ ಕೈ ಬರಹದಲ್ಲಿ ಬರೆದಿರುವ ಇಂಗ್ಲಿಷ ಸಹಿ ಹೊಂದಿರುವ ಒಂದು ಕೋರಿಕೆ ಪತ್ರ ಆರೋಪಿ ರವರು ದಿಃ 27-12-2008 ರಂದು ಅಪಘಾತದಲ್ಲಿ ಗಾಯಗೊಂಡು ಅಂಚೆ ಇಲಾಖೆಯಿಂದ ಯಾವುದೇ ವೈದ್ಯಕೀಯ ಸೌಲಭ್ಯ ಸಿಗಲಿಲ್ಲ ಎಂದು ದೃಡೀಕರಣ ಪತ್ರ ವನ್ನು ಕೋರಿ ನೀಡಿರುವ

ಪತ್ರವಾಗಿರುತ್ತದೆ . ನಾನು ಸದರಿ ಪತ್ರವನ್ನು ಚಾಸಾ-23 ರವರಿಗೆ ಪಂಚರ ಸಮಕ್ಷಮದಲ್ಲಿ ಹಾಜರು ಪಡಿಸಿದ್ದೇನೆ . ಆ ಸಮಯದಲ್ಲಿ ಪೋಲಿಸರು ಮಹಜರನ್ನು ಮಾಡಿ ಪಂಚರಾದ ಚಾಸಾ-13, 14 ರವರ ಸಹಿ ಪಡೆದುಕೊಂಡಿರುತ್ತಾರೆ . ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-80 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಸ್ವತ್ತು ಸ್ವಾದೀನತಾ ಮಹಜರ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-81 ಎಂದು ಸಾಕ್ಷಿ ಸಹಿ ನಿಪಿ-81 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 10-12-2020 ರಂದು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಇಲ್ಲಿ ಸಹಿ ಮಾಡಿದ್ದೇನೆ . ಸದರಿ ಸಹಿಯನ್ನು ಬಿ ವೊ ಜರ್ನಲ್ ಅನ್ನು ಚಾಸಾ-23 ರವರು ಹಸ್ತಾಂತರಿಸುವಂತೆ ಕೋರಿಕೊಂಡಿದ್ದು ಅದು ಕರ್ನೂರು ಶಾಖಾ ಅಂಚೆ ಕಚೇರಿಯ ದಿಃ 21-11-2016 ರಿಂದ 17-01-2017 ರವರೆಗೆ ಬಿ ವೊ ಜರ್ನಲ ಎಂದು ಕೈ ಬರಹದಲ್ಲಿ ಬರೆದಿರುತ್ತದೆ . ಅದರಲ್ಲಿ ಮೇಲಿನ ಹಾಗೂ ಕೊನೆಯ ಪುಟಗಳನ್ನು ಬಿಟ್ಟು ಒಟ್ಟು 204 ಪುಟಗಳು ಇರುತ್ತವೆ . ಸದರಿ ಜರ್ನಲ್ ಆರೋಪಿಯು ಬಿ ವೊ ದಲಿ ಮಾಡುತ್ತಿರುವ ತನ್ನ ದೈನದಿಂದ ಕಾರ್ಯ ಕೆಲಸ ಬರೆದು ಕೊನೆಗೆ ಸಹಿ ಮಾಡುಂತಹ ದಾಖಲಾತಿಯಾಗಿರುತ್ತದೆ. ಅದು ಆರೋಪಿ ಹಸ್ತಾಕ್ಷರದಲ್ಲಿ ಇರುತ್ತದೆ . ಕೆಲವು ಪುಟಗಳಲ್ಲಿ ಆರೋಪಿ ಸಹಿಯನ್ನು ಆಯಾತಾಕಾರದ ಕೆಂಪು ಶಾಯಿಯಲ್ಲಿ ಎಸ್ 1 ರಿಂದ ಎಸ್ 12 ಎಂದು ಗುರುತಿಸಲಾಗಿರುತ್ತದೆ . ಅದೇ ರೀತಿ ಕೆಲವು ಪುಟಳಲ್ಲಿ ಇಂಗ್ಲಿಷ ಹಸ್ತಾಕ್ಷರದಲ್ಲಿ ಬರೆಯಲಾಗಿರುತ್ತದೆ ಅದನ್ನು ಸಹ ಕೆಂಪು ಶಾಹಿಯಲ್ಲಿ ಗುರುತಿಸಿ ಆಯಾತಾಕಾರದಲ್ಲಿ ಎಸ್ 13 ರಿಂದ ಎಸ್ 18 ಎಂದು ಗುರುತಿಸಲಾಗಿರುತ್ತದೆ . ನಂತರ ಆರೋಪಿು ಬಿವೊ ಜರ್ನಲ ದಲ್ಲಿ ಬರೆದ ಕೆಲವು ಪುಟದಲ್ಲಿ ಇರುವ ಅಂಕಿಗಳನ್ನು ಕೆಂಪು ಶಾಯಿಯಲ್ಲಿ ಆಯತಾಕಾರದಲ್ಲಿ ಗುರುತಿಸಿ ಅವುಗಳನ್ನು ಎಸ್ 25 ರಿಂದ ಎಸ್ 30 ಎಂದು ಗುರುತಿಸಲಾಗಿದೆ . ಬಿವೊ ಜರ್ನಲ್ ನ್ನು ಪೇಪಬರ ಬೈಂಡಿಂಗನಲ್ಲಿ ಕಡವರ ಮಾಡಿ ಎಸ್

ಹೆಚ್ ಒ ಅರಗು ಸೀಲು ಹಾಕಿ ಪಂಚರ ಸಮಕ್ಷಮ ಚಾಸಾ-23 ರವರಿಗೆ ನೀಡಲಾಗಿದೆ . ಆ ಸಮಯದಲ್ಲಿ ಸಾಕ್ಷಿದಾರರಾಗಿ ಚಾಸಾ-15,16 ರವರು ಇದ್ದರು .

ಸಾಕ್ಷಿಗೆ ಬಿ ವೊ ಜರ್ನಲ್ ಪುಸ್ತಕ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿ ಕೈಬರಹದಲ್ಲಿ ಬಿ ವೊ ಜರ್ನಲ್ ಎಂದು ಇರುತ್ತದೆ . ಅದನ್ನು ಚಾಸಾ-23 ರವರಿಗೆ ಹಸ್ತಾಂತರಿಸಿದ್ದೇನೆ . ಅದರಲ್ಲಿರುವ ಮಾರ್ಕಿಂಗನ್ನು ಚಾಸಾ-23 ರವರು ಮಾಡಿರುತ್ತಾರೆ . ನಾನು ಹಸ್ತಾಂತರಿಸಿರುವ ಸಮಯ ಪೋಲಿಸರು ಮಹಜರಿಗೆ ನಾನು ಸಹಿ ಮಾಡಿ ಪಂಚರ ಸಮಕ್ಷಮ ಅದನ್ನು ವಶಪಡಿಸಿಕೊಂಡಿರುತ್ತಾರೆ .

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಡಿಕೆ ವಕೀಲರಿಂದಃ</u>

ನಾನು ಆರೋಪಿಯ ಮೇಲಾಧಿಕಾರಿಯಾಗಿರಲಿಲ್ಲ . ನಾನು ಘಟನೆ ನಡೆಯಿತು ಎನ್ನಲಾದ ದಿನ ಸದರಿ ಕರ್ನೂಲು ಅಂಚೆ ಕಚೇರಿಗೆ ಬೇಟಿ ನೀಡಿದ್ದು ಇಲ್ಲ . ಎಸ್ -1 ರಿಂದ ಎಸ್ 12, ಎಸ್ -13 ರಿಂದ ಎಸ್-18, ಎಸ್-25 ರಿಂದ ಎಸ್-30 ನ್ನು ನಮ್ಮ ಆಪೀಸಿನಲ್ಲಿ ಇರುತ್ತದೆ . ಅದು ವಂಚನೆಯ ಪ್ರಕರಣ ಆಗಿದ್ದರಿಂದ ಸದರಿ ಜರ್ನಲ ನನ್ನ ಕೈಯಲ್ಲಿ ಇತ್ತು . ಸದರಿ ಎಸ್-1 ರಿಂದ ಎಸ್ -30 ರ ದಾಖಲಾತಿ ನಿಮ್ಮ ಕೈಗೆ ಹೇಗೆ ಬಂದಿತ್ತು ಎಂದರೆ ನಾನು ಚಾರ್ಜ ತೆಗೆದುಕೊಂಡು ದಿಃ 21-01-2020 ರಿಂದ ನನ್ನ ಸುಪರ್ದಿಗೆ ಬಂದಿರುತ್ತದೆ . ಸದರಿ ದಾಖಲಾತಿಯನ್ನು ದೀ 21-01-2020 ರಂದು ಸಹಾಯ ಅಂಚೇ ಅದೀಕ್ಷಕರು ಜೊಸೇಪ ಹಸ್ತಾಂತರಿಸಿರುತ್ತಾರೆ . ಸದರಿ ಜೋಸೆಪ ರವರ ವಶಕ್ಕೆ ಆ ದಾಖಲಾತಿಗಳು ಯಾವ ಸಮಯದಿಂದ ಯಾವ ಸಮಯದವರೆಗೆ ಇತ್ತು ಎಂದರೆ ನನಗೆ ಹೇಳಲಾಗುವುದಿಲ್ಲ . ನಿಪಿ-82 ರಲ್ಲಿ ಯಾವ ಯಾವ ದಿನಾಂಕದಂದು ಎನೆಲ್ಲ ಬರೆಯಲಾಗಿದೆ ಎಂದು ನಿಮಗೆ ಹೇಳಲಾಗುತ್ತದೆ ಎಂದರೆ ಇಲ್ಲ . ನಿಪಿ-82 ರಲ್ಲಿ

ಕೆಲವೊಂದು ಕಡೆ ತಿದ್ದಲಾಗಿರುತ್ತದೆ ಅದು ಯಾವ ಕಾರಣದಿಂದ ತಿದ್ದಲಾಗಿರುತ್ತದೆ ಎಂದು ನಿಮಗೆ ಹೇಳಲಾಗುತ್ತದಾ ಎಂದರೆ ನನಗೆ ಹೇಳಲಾಗುವುದಿಲ್ಲ ಸಾಕ್ಷಿ ಪುನಃ ಅದೇ ದಾಖಲಾತಿ ತೆಗೆದುಕೊಂಡು ಒದಿ ನೋಡಿ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ . ದಿಃ 21-11-2016 ರಿಂದ 17-01-2017 ರವರೆಗೆ ಯಾರು ಕರ್ತವ್ಯದಲ್ಲಿ ಇದ್ದರು ಎಂದು ನನಗೆ ಹೇಳಲಾಗುವುದಿಲ್ಲ . ಬೇರೆ ಸಿಬ್ಬಂದಿಯವರು ಆ ದಿನ ಕರ್ತವ್ಯ ನಿರ್ವಹಿಸಿದ್ದರೆ ಅವರ ಬರವಣಿಗೆ ಮತ್ತು ಸಹಿ ಇರುತ್ತದೆ ಎಂದರೆ ಸರಿ . ಈ ಎಲ್ಲಾ ಪುಟಗಳಲ್ಲಿ ಆರೋಪಿ ಸಹಿ ಇರುವುದಿಲ್ಲ . ಒಂದು ದಿನದಲ್ಲಿ ಎಷ್ಟು ಎಂಟ್ರಿ ಆಗುತ್ತದೆ ಎಂದರೆ ಸಾಮಾನ್ಯವಾಗಿ 15 ರಿಂದ 20 ಎಂಟ್ರಿ ಆಗುತ್ತದೆ . ಪ್ರತಿಯೊಂದು ಪುಟಕ್ಕು ಸಹಿ ಹಾಕಲಾಗುತ್ತದಾ ಎಂದರೆ ಆ ದಿನದ ಕೊನೆಯ ಪುಟದ ರಜಿಸ್ಟರನಲ್ಲಿ ಸಹಿ ಹಾಕಲಾಗುತ್ತದೆ . ನಿಪಿ-82 ರ ಪ್ರಕಾರ ಎಸ್-6 ರಲ್ಲಿರುವ ಸಹಿ ಆರೋಪಿಯದ್ದಾಗಿರುತ್ತದೆ . ಈ ದಾಖಲೆ ಬರುವ ಮೊದಲು ಆರೋಪಿ ಯಾವರೀತಿಯಾಗಿ ಸಹಿ ಹಾಕುತಿದ್ದ ಎಂದು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸರಿ . ನಿಪಿ-82 ರಲ್ಲಿರುವ ಸಹಿ ಯಾರದ್ದು ಎಂದರೆ ಅದು ನಿಶಾನೆಗೆ ಒಳಪಡಿಸಿರುವುದಿಲ್ಲ ಯಾರದ್ದು ಎಂದು ಹೇಳಲು ಆಗುವುದಿಲ್ಲ . ನಿಪಿ-80 ನ್ನು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಇವರಿಗೆ ದಿಃ 21-12-2011 ರಲ್ಲಿ ನೀಡಲಾಗಿರುತ್ತದೆ . ನಿಪಿ-80 ರ ದಾಖಲಾತಿಯನ್ನು ಯಾರು ನಿಮಗೆ ಕೊಟ್ಟಿದ್ದು ಎಂದರೆ ಅಂಚೇ ಸಹಾಯಕ ಅದೀಕ್ಷಕರು ಜೊಸೆಪ್ ವರ್ಗಾವಣೆಗೊಂಡಿದ್ದರಿಂದ ಅದನ್ನು ನನಗೆ ಕೊಟ್ಟಿರತ್ತಾರೆ. ನಿಪಿ-80 ರ ಕೈಬರಹವನ್ನು ಯಾರು ಬರೆದಿದ್ದರು ಎಂದರೆ ಅದು ನನ್ನ ಸಮಕ್ಷಮದಲ್ಲಿ ಆಗಿದ್ದಲ್ಲ ಹಾಗಾಗಿ ನನಗೆ ಹೇಳಲು ಬರುವುದಿಲ್ಲ . ನಿಪಿ-82 ರಲ್ಲಿರುವ ಎಸ್-2 ದಲ್ಲಿರುವ ಸಹಿಗೂ ನಿಪಿ-80 ರಲ್ಲಿರುವ ಎಸ್-50 ಇರುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ . ಸಾಮಾನ್ಯವಾಗಿ ಪೊಸ್ಟಮಾಸ್ಟರಗಳು ಹಾಗೂ ಎಲ್ಲರೂ ಸಹ ಒಂದೇ ರೀತಿಯ ಸಹಿ ಹಾಕುತ್ತಾರೆ ಎಂದರೆ ಇರಬಹುದು .

ನನಗೆ ಪುತ್ತೂರು ಹಿರಿಯ ಅಧೀಕ್ಷಕರ ಕರೆದಿದ್ದು ಯಾಕೆ ಎಂದರೆ ನಾನು ಅಲಿಯೇ ಕೆಲಸ ಮಾಡುತ್ತಿದ್ದೆ . ಆ ಸಮಯದಲ್ಲಿ ಪುತ್ತೂರು ಹಿರಿಯ ಅಧೀಕ್ಷಕರು ಕಚೇರಿಯಲ್ಲಿ ಇದ್ದರಾ ಎಂದರೆ ನನಗೆ ನೆನಪಿಗೆ ಬರುತ್ತಿಲ್ಲ ಆ ಸಮಯದಲ್ಲಿ ಅವರು ಮಂಗಳೂರಿನ ಇನಚಾರ್ಜದಲ್ಲಿ ಇದ್ದರು . ದಿಃ 18-05-2020 ರಲ್ಲಿ ಚಾಸಾ-23 ರವರು ಮಃ 12-30 ಕ್ಕೆ ನಮ್ಮ ಕಚೇರಿಗೆ ಬಂದಿರುತ್ತಾರೆ . ಚಾಸಾ-13,14 ರವರು ನಿಮ್ಮ ಅಂಚೇ ಇಲಾಖೆಯವರು ಎಂದರೆ ಸರಿ . ಕೊರಿಕೆ ಪತ್ರದಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನಿಖರವಾಗಿ ಹೇಳಬಹುದಾ ಎಂದರೆ ಇಲ್ಲ . ಆ ಕೋರಿಕೆ ಪತ್ರವನ್ನು ಯಾವ ಶಾಹಿಯಲ್ಲಿ ಬರೆಯಲಾಗಿತ್ತು ಎಂದರೆ ಅದು ಪ್ರಿಂಟೇಡ್ ಕಾಪೀಯಾಗಿರುತ್ತದೆ . ನಿಪಿ-80 ನೀಲಿ ಶಾಹಿಯಲ್ಲಿ ಬರೆಯಲಾಗಿರುತ್ತದೆ . ಆರೋಪಿಯು ನನ್ನ ಮುಂದೆ ಯಾವುದೇ ಸಹಿ ಕೈ ಬರಹವನ್ನಾಗಲೀ ಮಾಡಿದ್ದು ಇಲ್ಲ ಎಂದರೆ ಸರಿ . ನಿಪಿ-79, 81 ನ್ನು ತಯಾರಿಸುವ ಸಮಯದಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿ . ನಿಪಿ-79, 81 ನ್ನು ಯಾವಾಗ ಎಲ್ಲಿ ಪ್ರಿಂಟ ಮಾಡಲಾಗಿದೆ ಮತ್ತು ಟೈಪ ಮಾಡಲಾಗಿದೆ ಎಂದು ನಿಮಗೆ ಗೊತ್ತಾ ಎಂದರೆ ದಿಃ 18-05-2020 ರಂದು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಕಚೇರಿಯಲ್ಲಿ ಚಾಸಾ-23 ರವರು ಲ್ಯಾಪಟಾಪನಲ್ಲಿ ಟೈಪ ಮಾಡಿ ಪ್ರಿಂಟ ತೆಗೆದಿರುತ್ತಾರೆ ಅವರು ಬರುವಾಗ ಲ್ಯಾಪಟಾಪ ಮತ್ತು ಪ್ರಿಂಟರ ತೆಗೆದುಕೊಂಡು ಬಂದಿದ್ದರು . ದಿಃ 21-12-2020 ರಂದು ಅಂಚೇ ಅಧೀಕ್ಷಕರ ವಿಭಾಗೀಯ ಕಚೇರಿ ಪುತ್ತೂರು ಕಚೇರಿಯಲ್ಲಿ ಚಾಸಾ-23 ರವರು ಹೇಳಿದ ಹಾಗೆ ಲ್ಯಾಪಟಾಪನಲ್ಲಿ ದೇವರಾಜ್ ಪೋಲಿಸರು ರವರು ಟೈಪ ಮಾಡಿ ಪ್ರಿಂಟ ತೆಗೆದಿರುತ್ತಾರೆ . ದಿಃ 18-05-2020 ರಂದು ಚಾಸಾ-23 ರವರು ಲ್ಯಾಪಟಾಪ ನಲ್ಲಿ ಟೈಪ ಮಾಡಿ ಪ್ರಿಂಟ ತೆಗೆದಿರುವ ಬಗ್ಗೆ ಬರೆದಿರುತ್ತಾರಾ ಎಂದರೆ ನನ್ನ ಸಮಕ್ಷಮ ಎಂದು ಬರೆದಿರುತ್ತಾರೆ . ದಸ್ತೂರ ಎಂದು ಬರೆದಿಲ್ಲ ಎಂದರೆ ಸರಿ .

ದಿಃ 18-05-2020 ರಂದು 21-12-2020 ರಂದು ಸದರಿ ಚಾಸಾ-23 ರವರು ನಿಮ್ಮ ಕಚೇರಿಗೆ ಬಂದಿರುವುದಿಲ್ಲ ಮತ್ತು ನಿಪಿ-79, 81 ರ ಪ್ರಕಾರ ಸ್ವತ್ತು ಸ್ವಾಧೀನ ಪ್ರಕಾರ ಮಹಜರ ತಯಾರಿಸಿದ್ದು ಇಲ್ಲ ಎಂದರೆ ಸರಿಯಲ್ಲ . ನೀವು ಯಾವುದೇ ದಾಖಲಾತಿಯನ್ನು ಚಾಸಾ-23 ರವರಿಗೆ ಹಸ್ತಾಂತರಿಸಿದ್ದು ಇಲ್ಲ ಎಂದರೆ ಸರಿಯಲ್ಲ . ಚಾಸಾ-23 ರವರ ಕೊರಿಕೆ ಮೇರೆಗೆ ಸಂಪ್ಯ ಪೋಲಿಸ ಠಾಣೆಗೆ ಹೋಗಿ ಅಲ್ಲಿಯೇ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.